# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,

# ಬೆಂಗಳೂರು ನಗರ.

## ಸಿಸಿ. 2963/2021

| | |
|---|---|
| ಸಾಕ್ಷಿದಾರರ ಹೆಸರು | ಮಿಥುನ |
| ತಂದೆಯ ಹೆಸರು | ಜವರಾಜ |
| ವಯಸ್ಸು | 33 ವರ್ಷ |
| ಉದ್ಯೋಗ | ಪ್ರೊಡಕ್ಷನ್ ಮ್ಯಾನೇಜರ್ |
| ವಾಸ | ರಾಜಾಜಿನಗರ, ಬೆಂಗಳೂರು. |
| ಪ್ರಮಾಣೀಕರಿಸಿದ ದಿನಾಂಕ | 28/06/2023 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಚಾಸ-2 ಮತ್ತು 3 ರವರು ನನ್ನ ಸಹೋದರಿಯವರು. ಇದೇ ನ್ಯಾಯಾಲಯದ ಆವರಣದಲ್ಲಿ ಇರುವ ಕರ್ನಾಟಕ ಬ್ಯಾಂಕ್ ನಲ್ಲಿ ನಾನು ಓ.ಡಿ.ಎ.ಡಿ. ಖಾತೆಯನ್ನು ಹೊಂದಿರುತ್ತೇನೆ. ಅದರ ಸಂಖ್ಯೆ.1257000300011701 ಆಗಿರುತ್ತದೆ. ನನ್ನ ಖಾತೆಯಲ್ಲಿ ರೂ.74,00,000/- ಹಣ ಇತ್ತು. ನನ್ನ ಖಾತೆಯಿಂದ ಬೇರೆಯವರ ಖಾತೆಗೆ ಹಣ ವರ್ಗಾವಣೆ ಯಾಗಿದೆ ಎಂದು ನನ್ನನ್ನು ಹಲಸೂರು ಗೇಟ್ ಪೊಲೀಸರು ಠಾಣೆಗೆ ಕರೆಯಿಸಿ ಮಾಹಿತಿ ನೀಡಿದ್ದರು. ನನ್ನ ಬ್ಯಾಂಕ್ ಖಾತೆಯ ಎಕ್ಸಟ್ರಾಕ್ಟ ನ್ನು ನೋಡಿದರೆ ಯಾರ ಬ್ಯಾಂಕ್ ಖಾತೆಗೆ ಎಷ್ಟು ಹಣ ವರ್ಗಾವಣೆಯಾಗಿತ್ತು ಎಂದು ಹೇಳುತ್ತೇನೆ. ನನ್ನ ಖಾತೆಯಿಂದ ಹಣ ವರ್ಗಾವಣೆ ಮಾಡುವಂತೆ ಚೆಕ್ ಗಳನ್ನಾಗಲೀ ಅಥವಾ ನಿರ್ದೇಶನವನ್ನಾಗಲೀ ನೀಡಿರಲಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದನ್ನು ಪರಿಶೀಲಿಸಿದ್ದು, ಅದು ತನ್ನ ಖಾತೆಯ ಅಕೌಂಟ್ ಎಕ್ಸಟ್ರಾಕ್ಟ ಎಂದು ಗುರುತಿಸಿದ್ದು, ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-7 ರ ಪ್ರಕಾರ ದಿನಾಂಕ 27/03/2017 ರಂದು ಮಂಜುನಾಥ ರವರ ಖಾತೆಗೆ ರೂ.15,00,000/- ಹಣವನ್ನು

904846 ಚೆಕ್ ಮೂಲಕ, ದಿನಾಂಕ 20/06/2017 ರಂದು ಕೃಷ್ಣಕುಮಾರ ಅವರ ಖಾತೆಗೆ ರೂ.5,00,000/- ಹಣವನ್ನು 904845 ಚೆಕ್ ಮೂಲಕ ನೀಡಲಾಗಿರುತ್ತದೆ. ಉಳಿದ ವರ್ಗಾವಣೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಖಾತೆಗೆ ಯಾವ ದಿನಾಂಕದಂದು ಎಷ್ಟು ಹಣ ಮರಳಿ ಬಂದಿತ್ತು ಎಂದು ಹೇಳಲು ಆಗುವುದಿಲ್ಲ. ಮೇಲೆ ಹೇಳಿದ ಮಂಜುನಾಥ ಮತ್ತು ಕೃಷ್ಣಕುಮಾರ ಅವರ ಖಾತೆಗೆ ಹಣ ವರ್ಗಾವಣೆ ಮಾಡಲು ಚೆಕ್ ನೀಡಿಲ್ಲ. ನನ್ನ ಖಾತೆಯಿಂದ ಹಣ ವರ್ಗಾವಣೆಯಾದ ಬಗ್ಗೆ ಮತ್ತು ನನ್ನ ಖಾತೆಗೆ ಹಣ ವಾಪಾಸು ಬಂದ ಬಗ್ಗೆ ಪೊಲೀಸರು ನನಗೆ ಮಾಹಿತಿ ನೀಡಿದರು. ಪೊಲೀಸರ ಮಾಹಿತಿಯ ಮೇರೆಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿದಾರರ ಹೇಳಿಕೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

2. ನಿಪಿ-7 ರ ಪ್ರಕಾರ ದಿನಾಂಕ 10/03/2017 ರಂದು ಪ್ರದೀಪ ರವರ ಖಾತೆಗೆ 15,00,000/- , ದಿನಾಂಕ 16/03/2017 ರಂದು ಪ್ರದೀಪ ರವರ ಚಾಲ್ತಿ ಖಾತೆಗಳಿಗೆ ರೂ, 15,00,000/- ಮತ್ತು ರೂ. 10,00,000/- ಹಣ ವರ್ಗಾವಣೆಯಾಗಿದೆ ಎಂದರೆ ಸರಿ. ದಿನಾಂಕ 06/07/2017 ರಂದು ಯಶೋಧಾ ಮತ್ತು ಕೋಡಿಗೌಡ ರವರ ಜಂಟಿ ಖಾತೆಗೆ ರೂ,5,00,000/- ಹಣ, ದಿನಾಂಕ 10/07/2017 ರಂದು ಕೃಷ್ಣಕುಮಾರ ರವರ ಖಾತೆಗೆ ರೂ.9,00,000/- ಹಣ ವರ್ಗಾವಣೆಯಾಗಿರುವುದು ಕಂಡು ಬರುತ್ತದೆ ಎಂದರೆ ಸರಿ. ದಿನಾಂಕ 14/12/2017 ರಂದು ನನ್ನ ಖಾತೆಗೆ ಪುನಃ ಎಲ್ಲ ಹಣ ಮರಳಿ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಬ್ಯಾಂಕ್ ಮ್ಯಾನೇಜರ್ ಆಗಿದ್ದರು ಎಂದರೆ ಸರಿಯಲ್ಲ. ನಾನು ಬ್ಯಾಂಕ್ ಸ್ಟೇಟಮೆಂಟನ್ನು ನೋಡಿದ ನಂತರ ಸದರಿ ವರ್ಗಾವಣೆಯಾದ ಬಗ್ಗೆ ನನ್ನ ನೆನಪು ಮರುಕಳಿಸಿರುತ್ತದೆ ಎಂದರೆ ಸರಿ.

**ಪಾಟೀ ಸವಾಲು : ಶ್ರೀ. ಎಸ್.ಎಸ್. ವಕೀಲರಿಂದಃ**

3. ನನ್ನ ತಂದೆ ನನ್ನ ಸಹೋದರಿ ಹಾಗೂ ನನ್ನ ಸಹೋದರ ಹಾಗೂ ನನ್ನ ಹೆಸರಿನಲ್ಲಿ ಖಾತೆಗಳನ್ನು ತೆರೆದಿದ್ದರು ಎಂದರೆ ಸರಿ. ಬ್ಯಾಂಕ್ ಖಾತೆಗಳನ್ನು ತೆರೆಯುವ ಸಮಯದಲ್ಲಿ ನಾನಾಗಲೀ , ನನ್ನ ಸಹೋದರ ಹಾಗೂ ನನ್ನ ಸಹೋದರಿಯಾಗಲೀ ಬಂದಿರಲಿಲ್ಲ ಎಂದರೆ ಸರಿ. ನಮ್ಮಗಳ ಸಹಿಗಳನ್ನು ಪಡೆದುಕೊಂಡು ನಮ್ಮ ಖಾತೆಗಳನ್ನು ಖಾತೆ ತೆರೆದಿರುತ್ತಾರೆ ಎಂದರೆ ಸರಿ. ನನ್ನ ತಂದೆ ನಮ್ಮ ಖಾತೆಗಳನ್ನು ನಿರ್ವಹಿಸುತ್ತಿದ್ದುದರಿಂದ ನಾವು ಬ್ಯಾಂಕ್ ಗೆ ಬರುತ್ತಿರಲಿಲ್ಲ ಎಂದರೆ ಸರಿ. ನಮ್ಮ 3 ಜನರ ಖಾತೆಗೆ ನನ್ನ ತಂದೆ ತಮ್ಮ ಮೊಬೈಲ್ ನಂಬರ ನೀಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ತಂದೆಯ ಮೊಬೈಲ್ ಗೆ ನಮ್ಮ ಖಾತೆಯಿಂದ ಹಣ ವರ್ಗಾವಣೆಯಾದ ಬಗ್ಗೆ ಮಾಹಿತಿ ಬರುತ್ತಿರಲಿಲ್ಲ. ನನ್ನ ತಂದೆ ನನ್ನ ಹೆಸರಿನಲ್ಲಿ ರೂ.74,00,000/- ಠೇವಣಿ ಇಟ್ಟಿದ್ದರು. ಪೊಲೀಸರು ನನಗೆ ಮಾಹಿತಿ ನೀಡುವವರೆಗೂ ನನ್ನ ಖಾತೆಯಲ್ಲಿ ಆಗಿರುವ ವ್ಯತ್ಯಾಸಗಳ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಪೊಲೀಸರು ನನಗೆ ಮಾಹಿತಿ ನೀಡುವವರೆಗೂ ನನ್ನ ಖಾತೆಯಲ್ಲಿ ವ್ಯತ್ಯಾಸವಾದ ಬಗ್ಗೆ ನನಗೆ ತಿಳುವಳಿಕೆ ಇರಲಿಲ್ಲ ಎಂದರೆ ಸರಿ. ನನ್ನ ಖಾತೆಯಲ್ಲಿ ಹಣದ ವ್ಯತ್ಯಾಸ ಆಗಿದೆ ಎಂದು ನಾನು ಪೊಲೀಸರಿಗೆ ದೂರು ನೀಡಿಲ್ಲ. ನಾನು ಪೊಲೀಸರಿಂದ ಮಾಹಿತಿ ಪಡೆದಿದ್ದೇನೆ ಮತ್ತು ನಾನು ಪೊಲೀಸರಿಗೆ ನಾನು ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿ. ಪೊಲೀಸರು ನನಗೆ ನನ್ನ ಬ್ಯಾಂಕ್ ಸ್ಟೇಟಮೆಂಟ ನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ತೋರಿಸಿಲ್ಲ. ನನ್ನ ಬ್ಯಾಂಕ್ ಖಾತೆಯಿಂದ ಯಾರು ಹಣ ವರ್ಗಾವಣೆ ಮಾಡಿದರು ಎಂದು ನಾನು ಪೊಲೀಸರಿಗೆ ಮಾಹಿತಿ ನೀಡಿಲ್ಲ. ಪೊಲೀಸರು ಹೇಳುವವರೆಗೂ ನನ್ನ ಖಾತೆಯಲ್ಲಿರುವ ಹಣವನ್ನು ಯಾರು ದುರುಪಯೋಗಪಡಿಸಿಕೊಂಡಿದ್ದರು ಎಂದು ನನಗೆ ಮಾಹಿತಿ ಇರಲಿಲ್ಲ. ಬ್ಯಾಂಕ್ ನಲ್ಲಿ ಅನೇಕ ಮಂದಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ಸರಿ. ಸಿಬ್ಬಂದಿಯವರು ಹಣದ ವರ್ಗಾವಣೆ ಮಾಡುತ್ತಿರುತ್ತಾರೆ ಎಂದರೆ ಸರಿ. ಸದರಿ ಸಿಬ್ಬಂದಿಯವರ ಪೈಕಿ ನನ್ನ ಹಣವನ್ನು ಯಾರು ವರ್ಗಾವಣೆ ಮಾಡುತ್ತಿರುತ್ತಾರೆ ಎಂದು

ನಿರ್ಧಿಷ್ಟವಾಗಿ ಹೇಳಲು ಆಗುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಇದೇ ಮೊದಲು ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ನನ್ನ ತಂದೆ ಠೇವಣಿ ಇಟ್ಟಿದ್ದ ಹಣ ಈಗಲೂ ಇದೆ ಎಂದರೆ ಸರಿ. ಸದರಿ ಠೇವಣಿ ಹಣದಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು**)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**